

## ಚಾಕೊಲೇಟ್ ಗುಡ್ಡಕ್ಕೂ ಕಹಿ

ಗುಡ್ಡದ ಸೌಂದರ್ಯ ಸವಿಯಲು ರೆಸಾರ್ಟ್‌ಗಳನ್ನು ಫಿಲಿಪ್ಪೀನ್ಸ್ ಸರ್ಕಾರ ನಿರ್ಮಿಸಿದೆ. ಪ್ರವಾಸೋದ್ಯಮ ಬೆಳೆದ ಕಾರಣ ಎಲ್ಲಾ ಸೌಕರ್ಯಗಳು ಅಲ್ಲಿವೆ. ಆದರೆ ಜನರ ಬದುಕಿನ ಭಾಗವಾಗಿರುವ ಗುಡ್ಡದ ಪರಿಸರವನ್ನು ಸರ್ಕಾರ ಪ್ರವಾಸೋದ್ಯಮ ದೃಷ್ಟಿಯಿಂದ ಮುಟ್ಟುಗೋಲು ಹಾಕಿಕೊಳ್ಳುವುದು ಹಾಗೂ ಹೊಸ ಕಾಯಿದೆ ರೂಪಿಸುತ್ತಿರುವುದಕ್ಕೆ ವಿರೋಧ ವ್ಯಕ್ತವಾಗಿದೆ. ಮಾವೋಯಿಸ್ಟ್, ಗೊರಿಲ್ಲಾ ನ್ಯೂ ಪೀಪಲ್ ಆರ್ಮಿ, ಜನರು ಮತ್ತು ಸರ್ಕಾರದ ನಡುವೆ ತಿಕ್ಕಾಟ ನಡೆಯುತ್ತಲೇ ಇದೆ. ಸರ್ಕಾರದ ಯೋಜನೆಗಳಿಂದ ತಮ್ಮ ಹಕ್ಕಿಗೆ ಧಕ್ಕೆಯಾಗುತ್ತದೆ ಎಂದು ಅಲ್ಲಿನ ನಿವಾಸಿಗಳ ಆಕ್ಷೇಪ.

ಸಮಬಲರಾಗಿದ್ದರಿಂದ ಯಾರೂ ಸೋಲದೆ, ಗೆಲುವೂ ಸಿಗದೆ ಕಾದಾಟ ಮಾತ್ರವೇ ಮುಂದುವರಿಯಿತು. ಎಷ್ಟು ದಿನ ಅಂತ ಅವರಾದರೂ ಜಗಳವಾಡುತ್ತಲೇ ಕಳೆದಾರು? ದಿನಕಳೆದಂತೆ ದಣಿದ ದೈತ್ಯರು ದ್ವೇಷ ಮರೆತು ಸ್ನೇಹಿತರಾಗಿಬಿಟ್ಟರಂತೆ. ಅವರೇನೋ ಸ್ನೇಹಿತರಾಗಿ ಒಬ್ಬರ ಹೆಗಲ ಮೇಲೆ ಇನ್ನೊಬ್ಬರು ಕೈ ಹಾಕಿ ಹೊರಟುಬಿಟ್ಟರು. ಆದರೆ ಅವರ ಕಾದಾಟಕ್ಕೆ ಸಾಕ್ಷಿಯಾದ ಆ ರಣಾಂಗಣ ಮಾತ್ರ ಹಾಗೆಯೇ ಇತ್ತು. ಅವರ ಜಗಳದಲ್ಲಿ ಹುಟ್ಟಿಕೊಂಡ ಮರಳು, ಕಲ್ಲುಗಳಿಂದಲೇ ಈ ಚಾಕೊಲೇಟ್ ಗುಡ್ಡಗಳು ನಿರ್ಮಾಣ ಆಗಿವೆ ಎಂಬುದು ಒಂದು ಕಥೆಯ ಉವಾಚ.

ಎರಡನೆಯದು ಪ್ರಣಯಾನುರಾಗದ ದಂತಕಥೆ: ಈ ಕಥೆಯ ನಾಯಕನ ಹೆಸರು ಅರೋಗೊ. ಅತ್ಯಂತ ಸದೃಢ, ಶಕ್ತಿಶಾಲಿ, ದೈತ್ಯನಾಗಿದ್ದ ಅವನಿಗೆ ಒಬ್ಬ ಪ್ರೇಯಸಿಯಿದ್ದಳು. ಅವಳ ಹೆಸರು ಅಲೋಯಾ. ಸಹಜ ವಯೋಮಾನದ ಆಕೆ ಕಾಲಾನಂತರ ಮರಣವನ್ನಪ್ಪುತ್ತಾಳೆ. ಅಲೋಯಾಳನ್ನು ಗಾಢವಾಗಿ ಪ್ರೀತಿಸುತ್ತಿದ್ದ ಅರೋಗೊ ವಿರಹ ವೇದನೆಯಿಂದ ದುಃಖಭರಿತನಾಗಿ ಅಳುತ್ತಿರುತ್ತಾನೆ. ದೈತ್ಯ ಶರೀರಿಯಾದ ಅವನ ದುಃಖವೂ, ಅದರಿಂದ ಜಾರಿದ ಕಣ್ಣೀರೂ ಅಷ್ಟೇ ಬೃಹದಾಕಾರವಾಗಿರುವುದು ಅಚ್ಚರಿಯೇನಲ್ಲ. ವಿರಹವೇದನೆಯಿಂದ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಅರೋಗೊನ ಕಣ್ಣೀರ ಹನಿಗಳು ಒಣಗಿ ಚಾಕೊಲೇಟ್ ಗುಡ್ಡಗಳಾಗಿವೆ. ಅಬ್ಬಾ! ಸವಿಯುವ ಚಾಕೊಲೇಟ್ ಹೆಸರಿಗೂ ಈ ಕಥೆಯ ಹಿಂದಿನ ವಿರಹದ ನೋವಿಗೂ ತದ್ವಿರುದ್ಧವಲ್ಲವೇ?

ಮೂರನೆಯ ದಂತಕಥೆ ತುಸು ತಮಾಷೆಯದ್ದು: ಒಂದು ಪಟ್ಟಣದ ಜನರನ್ನು ದೈತ್ಯ ರಾಕ್ಷಸಸ್ವರೂಪಿ ಕ್ಯಾರಬಾವೊ ಕಾಡುತ್ತಿರುತ್ತಾನೆ. ಅಲ್ಲಿನ ಜನರು ಬೆಳೆದ ಬೆಳೆಯನ್ನು ತಿನ್ನುವುದು, ಆಹಾರವನ್ನು ತಿನ್ನುವುದು ಮಾಡುತ್ತಾ ಜನರಿಗೆ ತಲೆನೋವಾಗಿರುತ್ತಾನೆ. ಇದರಿಂದ ಬೇಸತ್ತ ಜನರು ತಮ್ಮ ಮನೆಯಲ್ಲಿ ಉಳಿದ ಹಳಸಲು ಪಳಸಲನ್ನು ಗುಡ್ಡೆ ಹಾಕಿ ಕ್ಯಾರಬಾವೊಗೋಸ್ಕರ ಇಡುತ್ತಿರುತ್ತಾರೆ. ಕ್ಯಾರಬಾವೊ ಹೊಟ್ಟೆ ತುಂಬಿದರಾಯಿತು ಎಂದು ಹಳಸಲನ್ನು ಲೆಕ್ಕಿಸದೆ ಸಿಕ್ಕಿದ್ದು ತಿನ್ನುತ್ತಿರುತ್ತಾನೆ. ಹಳಸಲಿನಿಂದ ಕ್ಯಾರಬಾವೊನ ಹೊಟ್ಟೆ ಕೆಟ್ಟು ಕಂಡ ಕಂಡಲ್ಲಿ ಗುಡ್ಡೆ ಗಾತ್ರದಲ್ಲಿ ಮಲ ವಿಸರ್ಜನೆ ಮಾಡುತ್ತಾನೆ. ಅವನ ಮಲ ಗಟ್ಟಿಯಾಗಿ ಚಾಕೊಲೇಟ್ ಬೆಟ್ಟಗಳಾದವು ಎನ್ನುತ್ತದೆ ಕಥೆ. ಈ ಕಥೆಯನ್ನು ಕೇಳಿದ ಮೇಲೆ ಚಾಕೊಲೇಟ್ ತಿನ್ನಲೂ ಕಷ್ಟವಾಗುತ್ತಿದ್ದರೆ, ಅದಕ್ಕೆ ನಾವಂತೂ ಹೊಣೆಯಲ್ಲ!

ಚಾಕೊಲೇಟ್ ಗುಡ್ಡಗಳು ಹೆಚ್ಚಾಗಿ ಬೋಳಾಗಿದ್ದರೂ ಸುತ್ತಲೂ ಇಕ್ಕೆಲದಲ್ಲಿ ದಟ್ಟ ಕಾಡಿದೆ. ಕಾಡಿನ ಅಂಚಿನಲ್ಲಿ ಜನರು ವಾಸಿಸುತ್ತಾರೆ. ಕೃಷಿ ಭೂಮಿಯೂ ಇದೆ. ಗುಡ್ಡದ ಮೇಲೆ ಕಬ್ಬಿನ ಗರಿಗಳಂತೆ ಕೊರೆಯುವ ಬಿಳಿ ಸುಳಿಯ ಹುಲ್ಲು, ಜನ ವಾಸಿಸುವಲ್ಲಿ ತೆಂಗಿನ ಮರಗಳು, ಜಮೀನಿನಲ್ಲಿ ಭತ್ತ ಇನ್ನಿತರ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ದಟ್ಟ ಕಾಡಿನಲ್ಲಿ ಮಳೆ ಕಾಡಿನ ಮಹಾಗನಿ ಮರಗಳು, ಅಲ್ಲಲ್ಲಿ ಧುಮ್ಮಿಕ್ಕುವ ಜಲಪಾತಗಳು, ಜೀರುಂಡೆಗಳ ಸದ್ದು, ದಟ್ಟಾರಣ್ಯದಲ್ಲಿ ಪ್ರಾಣಿ ಪಕ್ಷಿಗಳು...

ಕೆಲವು ಗುಡ್ಡಗಳ ನೆತ್ತಿಯ ಮೇಲೆ ಹೋಗಲು ಸುಸಜ್ಜಿತವಾದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ವ್ಯೂ ಪಾಯಿಂಟ್‌ಗಳು ಸಹ ಇವೆ. ಕರ್ನಾಟಕದಲ್ಲಿ ಕರಾವಳಿಯ ನೆತ್ತಿಯ ಮೇಲೆ ಹಾಯ್ದುಹೋಗುವ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ನಾವು ಕಾಣಬಹುದಾದ ಅನೇಕ ಜಾತಿಯ ಪ್ರಾಣಿ, ಪಕ್ಷಿ, ಸಸ್ಯವರ್ಗ ಇಲ್ಲಿದೆ.

ಪ್ರತಿಕ್ರಿಯಿಸಿ: feedback@sudha.co.in



ಫಿಲಿಪ್ಪೀನ್ಸ್ ದೇಶದ ಬೊಹೋಲ್ ಪ್ರದೇಶದಲ್ಲಿನ ಚಾಕೊಲೇಟ್ ಗುಡ್ಡಗಳು